2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸೆಷನ್ಸ್ ಕೇಸು ನಂಃ 140/2019

| | | |
|---|---|---|
| ಸಾಕ್ಷಿದಾರರ ಹೆಸರು | - ಭಾರತಿ | ಪಿಡಬ್ಲೂ -02 |
| ಗಂಡನ ಹೆಸರು | - ಚಂದ್ರು | ಸಿಡಬ್ಲೂ -03 |
| ವಯಸ್ಸು | - 47 ವರ್ಷ | |
| ಉದ್ಯೋಗ | - ಖಾಸಗಿ ಕೆಲಸ | |
| ವಾಸ ಸ್ಥಳ | - ಬೆಂಗಳೂರು | |

ದಿನಾಂಕಃ 08.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಅಳಿಯ. ಚಾಸಾ.1 ನನ್ನ ಮಗಳು. ಚಾಸಾ.4 ಮತ್ತು 5 ನನ್ನ ಸಂಬಂಧಿಕರು.
2. ಚಾಸಾ.1 ಮತ್ತು ಆರೋಪಿ ನಡುವೆ ಸಂಪ್ರದಾಯದ ಪ್ರಕಾರ ಒಂಭತ್ತು ವರ್ಷದ ಹಿಂದೆ ಮದುವೆ ಮಾಡಿಕೊಟ್ಟಿರುತ್ತೇವೆ. ಅವರಿಬ್ಬರ ವೈವಾಹಿಕ ಸಂಬಂಧ ಚೆನ್ನಾಗಿತ್ತು. ಅವರ ನಡುವೆ ಯಾವತ್ತೂ ಜಗಳ ಆಗುತ್ತಿರಲಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.
3. ನನ್ನ ಸಮಕ್ಷಮ ಪೋಲೀಸರು ಯಾವುದೇ ಮಹಜರು ಮಾಡಿಲ್ಲ. ಆದರೆ ಮಹಜರಿನಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ.2 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಮಹಜರು ಕಾಲದಲ್ಲಿ ತೆಗೆದ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ.3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

4. ದಿಃ 02.06.2016 ರಂದು ಸಖರಾಯಪಟ್ಟಣ ಪೋಲೀಸರು ಚಾಸಾ.1 ರವರ ಮನೆಗೆ ಮಹಜರಿಗಾಗಿ ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಪೋಲೀಸರಿಗೆ ಚಾಸಾ.1 ರವರಿಗೆ ಆರೋಪಿತನು ಸದರಿ ಸ್ಥಳದಲ್ಲಿ ಚಾಸಾ.1 ರವರಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿ, ದಿಃ 01.06.2016 ರಂದು ಸದರಿ ಸ್ಥಳದಲ್ಲೆ ಚಾಸಾ.1 ರವರಿಗೆಹಲ್ಲೆ ಮಾಡಿರುತ್ತಾರೆ ಎಂದು ಹೇಳಿ ಘಟನಾ ಸ್ಥಳವನ್ನು ಚಾಸಾ.4 ಮತ್ತು 5 ರವರ ಸಮಕ್ಷಮ ತೋರಿಸಿದ ಮೇರೆಗೆ ನಿಪಿ.2 ರಂತೆ ಪೋಲೀಸರು ದಿಃ 02.06.2016 ರಂದು ಸಂಜೆ 4.00 ರಿಂದ 5.00 ಗಂಟೆಗೆ ಮಹಜರನ್ನು ಜರುಗಿಸಿ, ಚಾಸಾ.4 ಮತ್ತು 5 ರಂತೆ ನಿಪಿ.2 ನ್ನು ಜರುಗಿಸಿ ಅದೇ ಕಾಲಕ್ಕೆ ನಿಪಿ.3 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

5. ಅದೇ ದಿನ ಪೋಲೀಸರಿಗೆ ಕೃತ್ಯಕೆ ಸಂಬಂಧಿಸಿದಂತೆ ನಿಪಿ.4 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ತಮ್ಮದೇನು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

S.C. 140/2019 PW.2

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಗುರುಪ್ರಸಾದ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ